


International Journal of Kannada Research
www.kannadajournal.com

**ISSN: 2454–5813**
IJSR 2016; 2(4): 117-119

© 2016 IJKS
www.kannadajournal.com
Received: 22-08-2016
Accepted: 26-09-2016


**ಡಾ.ಬಾಳಪ್ಪ.ಎ.ಬಿ.**
ಕನ್ನಡ ಸಹ ಪ್ರಾಧ್ಯಾಪಕರು
ಬಿ.ಎಂ.ಎಸ್.ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹುಳಿಯಾರು, ತುಮಕೂರು ಜಿಲ್ಲೆ

**Correspondence**
**ಡಾ.ಬಾಳಪ್ಪ.ಎ.ಬಿ.**
ಕನ್ನಡ ಸಹ ಪ್ರಾಧ್ಯಾಪಕರು
ಬಿ.ಎಂ.ಎಸ್.ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹುಳಿಯಾರು, ತುಮಕೂರು ಜಿಲ್ಲೆ

# ಕುರುಬರ ಸಾಂಸ್ಕೃತಿಕನೆಲೆ –ತಾಳಿಕಟ್ಟೆ

**ಡಾ.ಬಾಳಪ್ಪ.ಎ.ಬಿ.**

**ಸಂಕ್ಷೀಪ್ತ ಸೂಚಿ**

‘ಇತಿಹಾಸ ಮೌನ ವಹಿಸಿದಾಗ ಸ್ಥಳಪುರಾಣಗಳು ಮಾತನಾಡುತ್ತವೆ’ ಎಂಬ ವಿದ್ವಾಂಸರ ಮಾತೊಂದಿದೆ. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ರಾಮಗಿರಿ ಹೋಬಳಿಯಲ್ಲಿರುವ ‘ತಾಳಿಕಟ್ಟೆ’ಯೂ ಇದಕ್ಕೆ ಹೊರತಾಗಿಲ್ಲ. ದಕ್ಷಿಣ ಭಾರತದ ಸಾಮ್ರಾಜ್ಯಗಳಲ್ಲಿ ಸಾಂಸ್ಕೃತಿಕ ಮಹತ್ವವನ್ನು ಪಡೆದಿದ್ದ ವಿಜಯನಗರ ಸಾಮ್ರಾಜ್ಯ ಪತನಕ್ಕೆ ಕಾರಣವಾದ ತಾಳಿಕೋಟೆ ಅಥವಾ ರಕ್ಕಸತಂಗಡಿ ಯುದ್ದಾನಂತರ ಅನೇಕ ಸಮುದಾಯಗಳು ಚದುರಿಹೋದವು. ಅವರಲ್ಲಿ ವಲಸೆ ಬಂದು ನೆಲೆಗೊಂಡವರಲ್ಲಿ ಕುರುಬರೇ ಸಾಂದ್ರವಾಗಿರುವ ಇಂದಿನ ಗ್ರಾಮವೇ ತಾಳಿಕಟ್ಟೆ. ಇವರು ತಾಳಿಕೋಟೆಯಿಂದ ಬಂದುದರಿಂದಲೋ ಅಥವಾ ತಾಳಿಕೋಟ ಕದನಾನಂತರ ಬಂದುದರಿಂದಲೋ ಈ ಸ್ಥಳವು ’ತಾಳಿಕಟ್ಟೆ’ ಎಂಬ ಸ್ಥಳನಾಮದಿಂದ ಪ್ರಸಿದ್ದವಾಗಿದೆ.

**ಪೀಠಿಕೆ**

ತಾಳಿಕಟ್ಟೆಯ ಪ್ರವೇಶದ್ವಾರವನ್ನು ಪ್ರವೇಶಿಸಿದರೆ ಈ ಗ್ರಾಮದ ಚಾರಿತ್ರಿಕತೆ ಧಾರ್ಮಿಕತೆ ಮಾತ್ರವಲ್ಲದೆ ಸಾಂಸ್ಕೃತಿಕ ಮಹತ್ವವೂ ಅರಿವಿಗೆ ಬರುತ್ತದೆ. ಐದು ಹೆಡೆ ಸರ್ಪದ ಕೆಳಗೆ ಶಿವಲಿಂಗವಿದ್ದು, ಅಕ್ಕಪಕ್ಕದಲ್ಲಿ ಶ್ರೀರೇವಣ ಸಿದ್ದೇಶ್ವರ ಮತ್ತು ಕನಕದಾಸರು ಇದ್ದಾರೆ. ಇವರ ಮಗ್ಗುಲಿಗೆ ಆ ಕಡೆ ಈಕಡೆ ಎರಡು ಟಗರಿನ ಚಿತ್ರಗಳಿದ್ದು ಇದು ಸ್ಪಷ್ಟವಾಗಿ ಕುರುಬರ ಸಾಂಸ್ಕೃತಿಕ ನೆಲೆ ಎಂಬುದರಲ್ಲಿ ಯಾವುದೇ ಸಂದೇಹ ಉಳಿಯಲಾರದು. ಇದಲ್ಲದೇ ಹಲವು ದೇವರುಗಳ ಆವಾಸ ಸ್ಥಳವೂ ಹೌದು. ಏಳು ದೇವರುಗಳ ಊರುಗಳಿಗೆ ಮೂಲ ಸ್ಥಾನದಂತಿರುವುದು ತಾಳಿಕಟ್ಟೆಯ ಮತ್ತೊಂದು ವಿಶೇಷವಾಗಿದೆ. ತಾಳಿಕಟ್ಟೆ ಗ್ರಾಮದ ಹಳ್ಳದ ಜಂಗಮ ಬೀರಲಿಂಗೇಶ್ವರ  ದೇವಸ್ಥಾನದ ಆವರಣದಲ್ಲಿ ನೆಟ್ಟಿರುವ ಶಾಸನವು ಕುರುಬರಿಗೆ ಸಂಬಂಧಿಸಿ ಅನೇಕ ಕುತೂಹಲ ಸಂಗತಿಗಳನ್ನು ದಾಖಲಿಸಿದೆ. ವಿಜಯನಗರವನ್ನಾಳಿದವರು ‘ಹಕ್ಕಬುಕ್ಕ’ ಎಂಬ ಕುರುಬ ದೊರೆಗಳು ಎಂದು ಹೇಳುತ್ತಾ ಕುರುಬಗೌಡರು, ಕೋಲಕಾರರು, ಪೂಜಾರಿಗಳು, ದಳವಾಯಿಗಳು ಹೀಗೆ ಅನೇಕರ ಹೆಸರುಗಳನ್ನು ದಾಖಲಿಸುತ್ತಾ ಹೋಗುತ್ತದೆ. ಆದರೆ ಈ ಶಾಸನವು ರಚನೆಗೊಂಡ ಕಾಲ ಮಾತ್ರ ದಾಖಲಾಗಿಲ್ಲ. ಇದು ಇಂದು ದೇವಸ್ಥಾನದ ಮುಂಭಾಗದಲ್ಲಿ ಹೂಳ ಹಾಕಿದೆ.

ವೀರಬಲ್ಲಾಳ ಪ್ರಭುಗಳ ಆಳ್ವಿಕೆಯನ್ನು ಕಸಿದುಕೊಂಡು ಮುಸಲ್ಮಾನರು ತಮ್ಮ ದೌರ್ಜನ್ಯ ದಬ್ಬಾಳಿಕೆ ಆಡಳಿತ ಪ್ರಾರಂಭಿಸಿದಾಗ ತಾಳಿಕೋಟೆಯಲ್ಲಿ ಸಾಮಂತರಾಗಿದ್ದ ಹಾಲನ ಕುರುಬರ ಕುಟುಂಬವೊಂದು ತಮಗೆ ಒದಗಬಹುದಾದ ಗಂಡಾಂತರ ಮನಗೊಂಡು ರಾತ್ರೋರಾತ್ರಿ ದಕ್ಷಿಣದೆಡೆಗೆ ಬಂದರೆಂದೂ, ಅವರ ಜೊತೆಗೆ ಇತರ ಕುಲದವರೂ ಬಂದರೆಂದು ಹೇಳಲಾಗುತ್ತದೆ. ರಾಜಕೀಯ ಆಡಳಿತಕ್ಕಾಗಿ ಮಹತ್ವಾಕಾಂಕ್ಷೆಯಿಂದ ಯುದ್ದ ನಡೆದರೆ, ಧನದಾಹ ಮತ್ತು ಸೇಡಿನ ಆಡಳಿತಕ್ಕಾಗಿ ದೌರ್ಜನ್ಯ ದಬ್ಬಾಳಿಕೆಗಳು ನಡೆಯುತ್ತಿದ್ದವು.

ಬಲ್ಲಾಳ ಪ್ರಭುಗಳ ಸೋಲಿನಿಂದ ತತ್ತರಿಸಿದಾಗ ಹಾಲನ ಕುರುಬರ ಕುಟುಂಬದ ಕೆಂಚಪ್ಪ, ಮಾಳಿಗಪ್ಪ, ಡೊಂಕಪ್ಪ, ಕೆಂಚಮರಿಯವ್ವ, ಚಿಕ್ಕಕೆಂಚಪ್ಪ ಮುಂತಾದ ಅಣ್ಣತಮ್ಮಂದಿರು ಮುಸಲ್ಮಾನರ ಲೂಟಿಗೆ ಹೆದರಿ ಕೋಟೆ ಕಟ್ಟಿಕೊಂಡು ವಾಸಿಸುತ್ತಿದ್ದರು. ಅವರಿಗೋರ್ವ ಸೌಂದರ್ಯವತಿಯಾದ ತಂಗಿಯಿದ್ದು ಋತುಮತಿಯಾಗಿ ಹನ್ನೆರಡು ವರ್ಷಗಳಾಗಿದ್ದರೂ ಸಾವಿರ ಮಂದಿಯಲ್ಲಿ ಎದ್ದು ಕಾಣುವಂತಹ ಈಕೆಯ ತಲೆಗೂದಲ ಸೌಂದರ್ಯಕ್ಕೆ ಮಾರುಹೋಗದವರಿಲ್ಲ. ಈಕೆಯನ್ನು ಏಳುಮಂದಿ ಸೋದರರು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದರು.

ಋತುಮತಿಯಾಗಿ ಹನ್ನೆರಡು ವರ್ಷಗಳಾಗಿದ್ದರೂ ಸಾವಿರ ಮಂದಿಯಲ್ಲಿ ಎದ್ದು ಕಾಣುವಂತಹ ಈಕೆಯ ತಲೆಗೂದಲ ಸೌಂದರ್ಯಕ್ಕೆ ಮಾರುಹೋಗದವರಿಲ್ಲ. ಈಕೆಯನ್ನು ಏಳುಮಂದಿ ಸೋದರರು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದರು.

ಒಂದು ದಿನ ಹಸುವಿನ ಕರುವೊಂದು ಹೊರಗೆ ಹೋಯಿತು. ಅದನ್ನು ಹಿಡಿದು ತರಲು ಕೆಂಚವ್ವ ಹೋದಂತೆಲ್ಲ ಆ ಕರುವು ಮುಸಲ್ಮಾನರ ಆಡಳಿತವಿದ್ದ ಅರಮನೆಯ ಬಳಿಗೆ ಹೋಯಿತು. ಅಂತೂ ಕರುವನ್ನು ಹಿಡಿದು ಕೆಂಚಮ್ಮ ತನ್ನ ನೀಳ ಜಡೆಯಿಂದ ಕೊರಳಿಗೆ ಸುತ್ತು ಹಿಡಿದು ತಂದಳು. ಇದನ್ನು ನೋಡುತ್ತಿದ್ದ ಕಾಮಾಂಧ ಮುಸ್ಲಿಂ ದೊರೆಯು ನೋಡಿ ಅವಳನ್ನು ಬಯಸುತ್ತಾನೆ. ಆಗ ಚಾರರೊಂದಿಗೆ ಹೇಳಿ ಕಳುಹಿಸುವನು. ನಮ್ಮಂತಹ ವೀರ ಅಣ್ಣತಮ್ಮಂದಿರಿದ್ದೂ ಏನು ಪ್ರಯೋಜನವೆಂದು ಮನಸ್ಸಿನಲ್ಲಿ ಮಂಡಿಗೆ ತಿನ್ನುತಿದ್ದರೂ ಮುಸಲ್ಮಾನರನ್ನು ಎದುರು ಹಾಕಿಕೊಳ್ಳುವಂತೆಯೂ ಇರಲಿಲ್ಲ. ಅದಕ್ಕಾಗಿ ಉಪಾಯವೊಂದನ್ನು ಆಲೋಚಿಸಿದರು. ನಮ್ಮ ಮನೆಯ ದೇವರಾದ ಹಿರಿಯಯ್ಯ(ಹಿರೇಬೀರದೇವರು) ನನ್ನು ಪೂಜಿಸಿ ಆರಾಧನೆ ಮಾಡಿದ ನಂತರ ಒಪ್ಪಿಸುತ್ತೇವೆಂದು ಹೇಳಿ ಕಳುಹಿಸಿ ಆರಾಧನೆಗೆ ತೊಡಗಿದರು. ಆರಾಧನೆಯು ನಡೆಯುತ್ತಿರುವಂತೆಯೇ ಇಬ್ಬರು ಸೊಸೆಯರು ಎರಡು ಗೂಡೆ ಹೊತ್ತು ಮನೆದೇವರಾದ ಬೀರಯ್ಯನನ್ನು ಇಟ್ಟುಕೊಂಡು ರಾತ್ರೋರಾತ್ರಿ ದಕ್ಷಿಣದ ಕಡೆಗೆ ಹೊರಟರು. ಈ ವಿಷಯ ತಿಳಿದ ಮುಸಲ್ಮಾನ ದೊರೆಯು ಬೆನ್ನು ಹತ್ತುತ್ತಾನೆ.

ಈ ವೇಳೆಗೆ ಬಹುದೂರ ಸಾಗಿದ್ದ ಕೆಂಚವ್ವನ ಅಣ್ಣಂದಿರ ಪರಿವಾರಕ್ಕೆ ಭಾರಿ ಪ್ರವಾಹದಿಂದ ಹರಿಯುತ್ತಿದ್ದ ಹೊಳೆಯೊಂದು ಎದುರಾಗುತ್ತದೆ. ಆಗ ಅಣ್ಣಂದಿರಿಗೆ ಗೊಂದಲವುಂಟಾದಾಗ ಧೈರ್ಯ ಹೇಳಿದ ಕೆಂಚಮ್ಮ ತನ್ನ ನಿಷ್ಠೆಗೆ ಹೇಳಿ ಮನೆದೇವರನ್ನು ದಾರಿ ಕೊಡುವಂತೆ ಪ್ರಾರ್ಥಿಸಿದಳು. ಆಗ ನದಿಯು ಎರಡು ಹೋಳಾಗಿ ಹರಿದು ದಾರಿಯನ್ನು ಬಿಟ್ಟುಕೊಟ್ಟಿತು. ಆ ಸಮಯಕ್ಕೆ ಬೆನ್ನತ್ತಿ ಬಂದ ಮುಸಲ್ಮಾನ ದೊರೆಯು ಹೊಳೆಯ ದಡದಲ್ಲಿ ನಿಂತು ‘ ನೀವು ಹೋದರ ಹೋಗಿರಿ, ನನ್ನ ದೇಶದ ಹದ್ದು ಕಾಗೆಗಳನ್ನು ಕರೆದುಕೊಂಡು ಹೋಗುತ್ತೀರ’ ಎಂದು ನಿಂದಿಸಿ ನನಗಾಗಿ ನಿನ್ನನ್ನು ಬಯಸಿರಲಿಲ್ಲ. ನಿನ್ನ ಅಪರೂಪದ ನೀಳಜಡೆ ನನ್ನನ್ನು ಆಕರ್ಷಿಸಿತ್ತು ಎಂದು ಹೇಳಿದನು

**ತೋಪುಜಾತ್ರೆ**

ಧಾರ್ಮಿಕತೆಯೇ ಜಾತ್ರಗೆ ಮೂಲ ಪ್ರೇರಣೆ. ಒಂದು ನಿರ್ಧಿಷ್ಟ ವೇಳೆಯಲ್ಲಿ ನಿರ್ಧಿಷ್ಟ ದೇವರಿಗೆ ಸಂಬಂಧಿಸಿದ ಎಲ್ಲ ಒಕ್ಕಲುಗಳು ಭಕ್ತರು ಸೇರಿ ಆರಾಧಿಸುವ ಆನಂದಿಸುವ ಧಾರ್ಮಿಕ ಕ್ರಿಯೆಗೆ ‘ಜಾತ್ರ’ ಎಂದು ಕರೆಯುತ್ತಾರೆ. ಮಧ್ಯಕರ್ನ್ಯಾಟಕದ ಚಿತ್ರದುರ್ಗ, ಚಿಕಮಗಳೂರು ಜಿಲ್ಲೆಗಳಲ್ಲಿ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಜಾತ್ರೆಗಳಲ್ಲಿ ತೋಪು ಜಾತ್ರೆ ವಿಶೇಷವಾದುದು. ಈ ಬೀರದೇವರ ಜಾತ್ರೆ ಒಂದು ತಿಂಗಳ ಕಾಲ ನಡೆದು ಭಕ್ತ ಸಮೂಹವನ್ನು ಮನಸೂರೆಗೊಳಿಸುತ್ತದೆ.

ಜಾತ್ರೆಗೆ ಒಂದು ತಿಂಗಳು ಮುನ್ನ ಗುಡಿಗೌಡ, ಬುದ್ದಿವಂತ, ಕೋಲಕಾರ, ಬಳಗಸ್ಥರು, ಸೇರಿ ನಿರ್ದಿಷ್ಟ ವ್ಯಕ್ತಿಗಳ ಮೂಲಕ ಆ ದೇವರ ಎಲ್ಲಾ ಒಕ್ಕಲುಗಳಿಗೆ ಭಂಡಾರ ಚೀಟಿ ಕಳುಹಿಸಿ ಮಿಸಲು ಕಾಣಿಕೆ ಬಗ್ಗೆ ತಿಳಿಸುತ್ತಾರೆ. ತಪ್ಪದೆ ಜಾತ್ರಗೆ ಎಲ್ಲಾ ಒಕ್ಕಲುಗಳೂ ಬರುವುದು ಕಡ್ಡಾಯ.ಜಾತ್ರೆಗೆ ಮೊದಲಿಗೆ ಎಂಟು ದಿನ ಮುನ್ನ ದೇವಸ್ಥಾನದ ಸುತ್ತಮುತ್ತ ತಾತ್ಕಾಲಿಕ ಗುಡಾರವನ್ನು ಒಕ್ಕಲುಗಳು ಹಾಕಿಕೊಳ್ಳಬೇಕು. ಜಾತ್ರೆಯು ಮುಗಿಯುವವರೆಗೂ ಇಲ್ಲಿಯೇ ಊಟ ವಸತಿ ಮಾಡಿಕೊಳ್ಳಬೇಕಾಗುತ್ತದೆ. ಜಾತ್ರೆಗೆ ಒಂದು ದಿನ ಮೊದಲು ಸೇರಿದ ಎಲ್ಲಾ ಒಕ್ಕಲುಗಳು ತಮ್ಮ ಊರುಗಳ ದೈವಗಳೊಡನೆ ಗೂಡೆಗಳನ್ನು ಹೊತ್ತು ತಂದು ತಮ್ಮ ಪಾಳೇವುಗಳಲ್ಲಿ ಗೃಹ ಪ್ರವೇಶ ಮಾಡಿ ಏನೋರನ್ನು ಭಿನ್ನ ಮಾಡಿಸಿ ಸಿಹಿ ಅಡುಗೆ ಮಾಡಿ ಊಟ ಮಾಡಿಸಬೇಕು. ಇವು ಜಾತ್ರೆಯ ಪೂರ್ವಸಿದ್ಧತೆಗಳಾಗಿವೆ.

ಜಾತ್ರೆಯ ಮೊದಲದಿನವೇ ಮೀಸಲು ಅಳೆಯುವ ಕಾರ್ಯಕ್ರಮ ದೇವರಿಗಾಗಿ ಭಕ್ತಿಯಿಂದ ತೆಗೆದಿರಿಸಿದ ವಸ್ತುಗಳೇ ಮೀಸಲು. ದೇವಸ್ಥಾನದ ಮುಂದಿನ ಚಪ್ಪರದಲ್ಲಿ ಗೌಡ, ಬುದ್ದಿವಂತ, ಕೋಲ್ಕಾರ ಇತರೇ ಗಣ್ಯರು ಸೇರಿ ಪ್ರತಿಗೂಡೆಯಿಂದ ನಿರ್ಧಿಷ್ಟ ಪ್ರಮಾಣದ ಅಕ್ಕಿ,ಬೇಳೆ, ಬೆಲ್ಲ ಕಾಯಿ ಹಣ್ಣು ದೀಪಾರಾಧನೆಗೆ ಬೇಕಾಗುವ ಕಾಣಿಕೆ ಹಣವನ್ನು ಪಡೆಯುತ್ತಾರೆ. ಮೀಸಲನ್ನು ಆಯಾಯಾ ಒಕ್ಕಲು ಮನೆಯ ಮುತ್ತೈದೆಯರೇ ನೀಡುವುದು ಕಡ್ಡಾಯವಾಗಿದೆ. ನೀಡಿದ ಮೀಸಲನ್ನು ಗೌಡ, ಕೋಲ್ಕಾರ, ಬುದ್ದಿವಂತ, ಒಡೆಯರೂ ಸಮಾನವಾಗಿ ಹಂಚಿಕೊಳ್ಳುವುದೂ ಈ ಸಮುದಾಯದ ಶಿಸ್ತಿನ ಕ್ರಮವೇ ಸರಿ.

ಮೀಸಲು ಅಳೆದ ಮರುದಿನವೇ ಆ ದೇವರಿಗೆ ಯಾವ ಪಟ್ಟ ಇಲ್ಲವೋ ಆ ಪಟ್ಟಗಳ ಆಯ್ಕೆ ಮತ್ತು ದೀಕ್ಷೆ ನಡೆಯುತ್ತದೆ. ದೀಕ್ಷಾ ಪಟ್ಟಕ್ಕೆ ಬರುವವರೆಲ್ಲರೂ ಕೋರು ಹುಡುಗರೇ ಆಗಿರಬೇಕು. ಬೀರದೇವರು ಕುರುಹು ಮಾಡಿದ ಪಟ್ಟದವರನ್ನು ಶಾಸ್ತ್ರೋಕ್ತವಾಗಿ ಪಟ್ಟದೀಕ್ಷೆ ನೀಡುತ್ತಾರೆ. ಇದು ಸರದಿಯಂತೆ ನಡೆಯುತ್ತದೆ. ಒಂದು ಬೀರದೇವರಿಗೆ ಒಬ್ಬ ದಳವಾಯಿ, ಮೂರು ಜನ ಈರಗಾರರು, ಹತ್ತರಿಂದ ಹದಿನೈದು ಜನ ಪೂಜಾರರು, ಹತ್ತರಿಂದ ಹನ್ನೆರಡು ಜನ ಒಂದು ಹೊತ್ತಿನವರನ್ನು ಆಯ್ಕೆ ಮಾಡಲಾಗುತ್ತದೆ. ಇವರೇ ನಿಜವಾದ ಬೀರದೇವರ ಪರಿವಾರವಾಗಿರುತ್ತದೆ. ಪಟ್ಟದ ಆಯ್ಕೆ ಮತ್ತು ದೀಕ್ಷೆಯ ನಂತರ ಮರುದಿನ ಉತ್ಸವವಿರುತ್ತದೆ. ಅಂದು ಬೀರದೇವರು ತನ್ನ ಪರಿವಾರ ಸಮೇತ ಎಲ್ಲ ಪಾಳೇವುಗಳಿಗೆ(ತಾತ್ಕಾಲಿಕ ಬಿಡಾರ) ಬಿಜಯ ಮಾಡುತ್ತದೆ. ಆ ದಿನ ಸಿಹಿಯೂಟವಿದ್ದರೆ ಮರುದಿನ ಗಾವು ಸಿಗಿಯುವುದು, ಕುರುವು ಕೇಳುವುದು, ಹರಕೆ ಹೊತ್ತ ಕುರಿ ಗೌಡರು ತಮ್ಮ ಕುರಿಗಳೊಂದಿಗೆ ದೇವಸ್ಥಾನದ ಸುತ್ತ ಮೂರು ಪ್ರದಕ್ಷಿಣೆ ಹಾಕಿಸುವುದು ಇದರಿಂದ ಕುರಿಗಳು ಹೆಚ್ಚುತ್ತವೆಂಬ ನಂಬಿಕೆಯಿದೆ.

**ಏಳೂರ ದೇವರ ಕಾಳಗ**

ತಾಳಿಕಟ್ಟೆ ಹಿರಿಯ ಬೀರದೇವರ ಒಕ್ಕಲೊಂದು ಚನ್ನಗಿರಿಯ ಆನವೇರಿಗೆ ಚದುರಿಹೋಗಿರುವಾಗ ಹಿರಿಯಯ್ಯ ತನ್ನ ಬೆಸಮಗನನ್ನು ಕರೆದು ಹೋದ ಒಕ್ಕಲನ್ನು ನೋಡಿ ಬಾ ಎಂದು ಕಳುಹಿಸಿದರೆ ಆ ಒಕ್ಕಲುಹಿರಿಯನ ತಲೆಯನ್ನು ಕತ್ತರಿಸಿ ತಂದು ಆನೆವೇರಿ ಸಿದ್ದಯ್ಯನ ಮತ್ತವನ ಹಿಂಬಾಲಕರ ರೋಷಕ್ಕೆ ಗುರಿಯಾಗಿ ಗಡಿನಾಡ ವ್ಯಾಜ್ಯವನ್ನು ಕೆಣಕಿ ಬಂದ ಸಲುವಾಗಿ ತಾಳಿಕಟ್ಟೆ ಹಿರಿಯಯ್ಯ, ಅನವೇರಿ ಸಿದ್ದಯ್ಯ, ದುಮ್ಮಸಿದ್ದಯ್ಯ, ಬನಿಹಟ್ಟಿ ಸಿದ್ದಯ್ಯ ಮುಂತಾದವರು ಹೊನ್ನೇಬಾಗಿ ದಿಬ್ಬದಲ್ಲಿ ಪಂಚಾಯ್ತಿ ಮಾಡುತ್ತಿರುವಾಗ ಹೋದ ಒಕ್ಕಲನ್ನು ಬಿಡದಿದ್ದ ಹಿರಿಯಯ್ಯನ ಬಲಗೆಪ್ಪೆ(ಕಿವಿ)ಯನ್ನು ಮೋಜುಬಳೆ ಚಿಕ್ಕಣ್ಣ ಕಡಿಯಲಾಗಿ ಪ್ರಜ್ಞೆತಪ್ಪಿ ಬಿದ್ದ ಹಿರಿಯಯ್ಯನ ಸುದ್ದಿ ತಿಳಿದು ಆತನ ಏಳೂ ಜನ ಅಣ್ಣತಮ್ಮಂದಿರು ಬಂದು ಅನವೇರಿಯ ಸಿದ್ದಯ್ಯನ ಸೊಕ್ಕು ಮುರಿದು ಬ್ಯಾಲನೂರು ಕುಟುಂಬದ ಆ ಒಂದು ಒಕ್ಕಲನ್ನು ಅನವೇರಿಯಿಂದ ತಾಳಿಕಟ್ಟೆಗೆ ಕರೆತರುವ ವಿಚಾರವೇ ಏಳೂರ ದೇವರ ಕಾಳಗವಾಗಿದ್ದು ಸುತ್ತಮುತ್ತಲ ಜನರಲ್ಲಿ ಒಂದು ವೀರಕಾವ್ಯದಂತೆ ಲಾವಣಿಯಾಗಿ ಪ್ರಸಿದ್ದಿ ಪಡೆದಿರುವ ಕತೆಯಾಗಿದೆ. ಇದರಲ್ಲಿ ಏಳು ಊರುಗಳಿಗೆ ಸಂಬಂಧಿಸಿದ ಕುರುಬರ ಬೆಡಗುಗಳನ್ನೂ ಉಲ್ಲೇಖಿಸಲಾಗಿದೆ.

**ಉಪಸಂಹಾರ/ಕೊನೆಯ ಮಾತು**

ತಾಳಿಕಟ್ಟೆ ಒಂದು ಪ್ರಾದೇಶಿಕ ವೈವಿಧ್ಯತೆಯಿಂದ ಕೂಡಿರುವುದು ಮಾತ್ರವಲ್ಲದೆ ಧಾರ್ಮಿಕತೆ, ಚಾರಿತ್ರಿಕತೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವ ಪಡೆದಿರುತ್ತದೆ. ಇದರಲ್ಲಿ ಬಳಕೆಯಾಗಿರುವ ಊರು, ವ್ಯಕ್ತಿಗಳು, ಘಟನೆಗಳು ಇಂದಿಗೂ ಇಂದಿಗೂ ಜೀವಂತಿಕೆಯನ್ನು ಪಡೆದಿರುವ ಇತರ ಗ್ರಾಮಗಳಂತೆ ಕಂಡುಬರುತ್ತದೆ. ಇಲ್ಲಿನ ಹಾಲನ ಕುರುಬರು, ಸಾವಂತ, ಬ್ಯಾಲನ,ಗಂಡುಗೊಲೆ, ಸಂಗೇ,ಬಸ್ಲೇನ್,ಕಪ್ಪಿನ, ಗೌಡನ, ಹುಲ್ಲೇನ, ಧಾರೆ, ಬಲ್ಲಾಳ ಕುರುಬರು ಮುಂತಾದ ಬೆಡಗುಗಳ ಆವಾಸಸ್ಥಾನವಾಗಿದ್ದು ಹಿರಿಯಯ್ಯನ(ಹಿರೇ ಬೀರದೇವರು) ಪ್ರಭಾವವಿರುವ ತಾಳಿಕಟ್ಟೆ ಒಂದು ಸಾವಿರ ಮನೆಗಳಿರುವ ಕುರುಬ ಸಮುದಾಯದ ಪ್ರಾಬಲ್ಯವಿರುವ ಗ್ರಾಮವಾಗಿದೆ.

**ಗ್ರಂಥಋಣ**

1. ಏಳೂರು ದೇವರ ಕಾಳಗ–ಡಾ.ರಾಜಪ್ಪ ದಳವಾಯಿ.
2. ಕುರುಬರ ಕುರುಹುಗಳು–ಚಂದ್ರಪ್ಪ.ಎಚ್.